Regd No BG 155 26-10-1969

SATYAVADI Daily, MYSORE 4 ★★ 53 rd Year of Publication

ಸತ್ಯವಾದಿ ಪತ್ರಿಕೆ ಮಹೋತ್ಸವ ನೆರವೇರಿಸಿದ

Golden Jubilee Celebrated Paper

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಕೇರಳದಲ್ಲಿ ರಾಷ್ಟ್ರಪತಿ ಆಳ್ವಿಕೆಯೇ?

ಸಭಾಪರಿತ್ಯಾಗ

ವಿಶ್ವಸಂಸ್ಥೆ— ವಿಶ್ವಸಂಸ್ಥೆ ವಾರ್ಷಿಕೋತ್ಸವ ಆಚರಿಸುವ ವಿಷಯದಲ್ಲಿ ತಟಸ್ಥ ರಾಜ್ಯಗಳು ಥರಾವಿನ ಬಗ್ಗೆ ಚರ್ಚಿಸಲು ಏರ್ಪಡಿಸಿದ್ದ ವಿಾಟಿಂಗಿಗೆ ಪಾಕಿಸ್ತಾನ ಪ್ರತಿನಿಧಿ ಬರಲು, ಭಾರತ ಪ್ರತಿನಿಧಿ ಸಭಾ ಪರಿತ್ಯಾಗ ಮಾಡಿದರು.

★

ದೇವಸ್ಥಾನದ ಹಣವಿಲ್ಲ

ಚಿತ್ತೂರು— ಚಿತ್ತೂರಿನ ಪೌರಸೌಕರ್ಯ ಹೆಚ್ಚಿಸಲು ತಿರುಪತಿ ದೇವಾಲಯಗಳ ಹಣ ವಿನಿಯೋಗಿಸುವ ಸಾಧ್ಯತೆ ಇಲ್ಲವೆಂದು ಮುಖ್ಯಮಂತ್ರಿ ಶ್ರೀ ಬ್ರಹ್ಮಾನಂದ ರೆಡ್ಡಿ ಹೇಳಿದರು.

★

ಭತ್ಯ ಹೆಚ್ಚಿಕೆ

ಮದರಾಸು— ಶಾಸನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರ ದಿನ ಭತ್ಯವನ್ನು ರೂ 15 ರಿಂದ 20 ಕ್ಕೆ ಹೆಚ್ಚಿಸಿರುವದನ್ನು ಸರಕಾರ ಪ್ರಕಟಿಸಿದೆ,

○

ನಾಗರೀಕತೆ

ಡುಸಿಲಿಡಾರ್ಫ್— ಫೆಡರಾಲ್ ರಿಪಬ್ಲಿಕ್ ಜರ್ಮನಿಯಲ್ಲಿ ಪ್ರತಿ ವರ್ಷವೂ ಎರಡು ಮಿಲಿಯ ಟನ್‌ಗಳಷ್ಟು ಧೂಳು, ನಾಲು, ನಾಲ್ಕು ಮಿಲಿಯ ಟನ್‌ಗಳಷ್ಟು ಗಂಧಕದ ಡೈ ಆಕ್ಸೈಡ್ ಮತ್ತು ಆರು ಮಿಲಿಯ ಟನ್‌ಗಳಷ್ಟು ಕಾರ್ಬನ್ ಮಾನಾಕ್ಸೈಡ್ ವಾತಾವರಣಕ್ಕೆ ಸೇರಿ ಅಶುದ್ಧಿಗೊಳಿಸುತ್ತಿತ್ತೆ ಎಂದು ಇತ್ತೀಚೆಗೆ ನಡೆಸಿದ ವಿಚಾರಣೆಯ ವಿವರಣೆಯಿಂದ ತಿಳಿದುಬಂದಿದೆ.

ಸ್ಪಷ್ಟೋಕ್ತಿ

ಬೆಂಗಳೂರು.... ದೇಶದಲ್ಲಿನ ರಾಜಕೀಯ ಪ್ರಗತಿ ಬಗ್ಗೆ ಬುದ್ಧಿವಂತರು ನಿಸ್ಸಂಕೋಚವಾಗಿ ಸ್ಪಷ್ಟವಾಗಿ ತಿಳಿಸುವುದು ಅವಶ್ಯಕವೆಂದು ಎಂ ಪಿ ಸಿ ಸಿ ಅಧ್ಯಕ್ಷ ಡಾ ॥ ನಾಗಪ್ಪ ಆಳ್ವಾರವರು ಪೇರುದಾರರ ಸಂಘದಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದರು.

★

ಪೈಗಂಬರರ ಬೋಧನೆಯಂತೆ ಆಚರಿಸಿ

ಅಹಮದಾಬಾದು— ಪೈಗಂಬರ್‌ರವರ ಬೋಧನೆಯಂತೆ ಆಚರಿಸಿ, ಎಲ್ಲಾ ಮಾನವರನ್ನೂ ಪ್ರೀತಿಸಿ, ಸೇವಿಸಿ, ಮತದ ಹೆಸರಿನಲ್ಲಿ ಹಿಂದೂ—ಮುಸ್ಲಿಂ ಘರ್ಷಣೆ ನಿಲ್ಲಿಸಲು ಮಸೀದಿಯಲ್ಲಿ ಖಾನ್ ಅಬ್ದುಲ್ ಗಫಾರ್ ಖಾನರವರು ತಿಳಿಸಿದಾಗ, ಕೆಲವರ ಕಣ್ಣಿನಲ್ಲಿ ನೀರು ಬಂದಿತು : ಕೆಲವರು ಮನಶ್ಶಾಂತಿಯಿಂದ " ಅಲ್ಲಾ " ಎಂದು ಉಚ್ಚರಿಸಿದರು – ಹಿಂದೂಗಳೂ ಮತದ ನಿಜವಾದ ಬೋಧನೆಯಂತೆ ನಡೆದು ದ್ವೇಷ ತ್ಯಜಿಸಬೇಕೆಂದು ಹಿಂದೂಗಳನ್ನೂ ತಾವು ಕೇಳಿಕೊಳ್ಳುತ್ತಿರುವದಾಗಿ ಹೇಳಿದರು.

●

ಪ್ರಧಾನಿ ಪರ

ಹೈದರಾಬಾದು— ಹೊಸ ಕಾಂಗ್ರೆಸ್ ಅಧ್ಯಕ್ಷನ ನೇಮಕದ ಬಗ್ಗೆ ಆಂಧ್ರ ಪ್ರದೇಶ ಪ್ರಧಾನಿಯವರ ಪರ ಇರುವದೆಂದು ಹೇಳಲಾಗಿದೆ.

★

ವಿಷಾದಕರ

ಮದರಾಸು— ಕೇರಳ ಮಂತ್ರಿಮಂಡಲ ಪತನವಾದುದು ವಿಷಾದಕರವೆಂದು ಮುಖ್ಯ ಮಂತ್ರಿ ಶ್ರೀ ಕರುಣಾನಿಧಿ ಹೇಳಿದರು.

ನವೀನ ಗಾಂಧಿ ಸಮಾಧಿ

ಬೊಂಬಾಯಿ.... ವಾರ್ಧಾದಲ್ಲಿ ಹೊಸ ರೀತಿಯ ಗಾಂಧಿ ಸಮಾಧಿಯ ಶಂಕುಸ್ಥಾಪನೆಯನ್ನು ನವೆಂಬರ್ 4 ರಂದು ಖಾನ್ ಅಬ್ದುಲ್ ಗಫಾರ್‌ಖಾನರು ನೆರೆವೇರಿಸುವರು – 10 ಅಡಿ ಸಮಾಧಿಗೆ 700 ಕಲ್ಲು ಉಪಯೋಗಿಸಲಾಗುವುದು ; ಕಲ್ಲುಗಳ ಮಧ್ಯೆ 3–4 ಅಂಗುಲ ಖಾಲಿ ಬಿಡಲಾಗುವುದು ; ಹೊರಗೆ ಗೀತಾ ಶ್ಲೋಕಗಳು ಕೆತ್ತಲಾಗುವುದಾ .... ಭಾರತೀಯ ಮಷ್ಯಾಶ್ರಮಗಳಂತೆ ಗಿಡ, ಪೊದರು, ಬಳ್ಳಿ, ನೀರಿನ ಜರಿ, ಬಂಡೆಗಳು ಇರುವವು – ಒಳಗೆ ಬುದ್ಧ, ಜೈನ, ಸಿಕ್, ಜೋರಾಷ್ಟ್ರಿಯರ್, ಇಸ್ಲಾಂ, ಕ್ರೈಶ್ಚಿಯರ್ ಮತಗಳ ಪ್ರಾರ್ಥನೆ, ಮತ್ರಪಠನೆಗಳಿರುತ್ತವೆ.

○

ರಾಜ್ಯಪಾಲರ ಕರ್ತವ್ಯ

ಬೆಂಗಳೂರು— ನಡವಳಿಕೆ ಮತ್ತು ಸಂಪ್ರದಾಯ ಅಥವಾ ಅಧಿಕೃತ ಅಭಿಪ್ರಾಯಗಳ ಆಧಾರದ ಮೇಲೆ ಗೌರ್ನರರ ನಿರ್ದಿಷ್ಟ ಅಧಿಕಾರ, ಕರ್ತವ್ಯ ಬಗ್ಗೆ ಮಾರ್ಗದರ್ಶನವೀಯುವುದು ಆವಶ್ಯವೆಂದು ರಾಜ್ಯಪಾಲರು ಶ್ರೀ ಧರ್ಮವೀರರು ಪತ್ರಿಯವರೊಡನೆ ಮಾತನಾಡುತ್ತಾ ಹೇಳಿದರು.

★

ಗುಲ್ಬರ್ಗ— ಭಾರತದಲ್ಲಿ ಪ್ರಜಾರಾಜವು ಇನ್ನೂ ಬೆಳೆದುಬರುವ ಸ್ಥಿತಿಯಲ್ಲಿರುವಾಗ ಕಾರ್ಯಾಂಗವು ಹಿಂದಿನ ಕಾಲದ ರಾಜರಷ್ಟು ವಿವರೀತ ಅಧಿಕಾರ ವಹಿಸಿಕೊಂಡಿದೆ, ಎಂದು ಭಾರತದ ಮಾಜಿ ಮುಖ್ಯ ನ್ಯಾಯಾಧೀಶರಾದ ಶ್ರೀ ಕೆ ಸುಬ್ಬರಾವ್‌ರವರು ವಕೀಲ ಸಂಘದ ಭೋಜನ ಕೂಟದಲ್ಲಿ ಹೇಳಿದರು.

ಅಧ್ಯಕ್ಷರ ತೆಳ್ವಿಕೆ

ನವದೆಹಲಿ— ಕೇರಳದಲ್ಲಿ ಸಂಯುಕ್ತರಂಗ ಮಂತ್ರಿಮಂಡಲದ ಪತನದಿಂದ, ಅಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತ ಜಾರಿಗೆ ತಂದು ಮಧ್ಯವರ್ತಿ ಚುನಾವಣೆ ಬಿಟ್ಟರೆ ಬೇರೇ ಮಾರ್ಗವಿಲ್ಲವೆಂದು ರಾಜಕೀಯ ವರ್ತುಳದಲ್ಲಿನ ಊಹಾಪೋಹ.

★

ಮತಸಂಗ್ರಹ

ಬೆಂಗಳೂರು.... ಶ್ರೀ ನಿಜಲಿಂಗಪ್ಪನವರ ಕಾಂಗ್ರೆಸ್ ಅಧ್ಯಕ್ಷತೆ ಅವಧಿಯನ್ನು ಕತ್ತರಿಸುವ ಪ್ರಯತ್ನದ ವಿನಂತಿಗೆ ಮೈಸೂರಿನ 34 ಎ ಐ ಸಿ ಸಿ ಸದಸ್ಯರಲ್ಲಿ 15 ಜನರು ಒಪ್ಪಿಗೆ ಮಾಡಿರುವರೆಂದು ಅತೃಪ್ತ ಕಾಂಗ್ರೆಸಿಗರೊಬ್ಬರು ಹೇಳಿದರು.

★

ಹೆಚ್ಚಿಗೆ ಬಸ್‌ಗಳು

ಮೈಸೂರು— ದಸರಾ ಕಾಲದಲ್ಲಿ ನೂರು ಹೆಚ್ಚಿಗೆ ಬಸ್‌ಗಳನ್ನು ಸಾರಿಗೆ ಸಂಸ್ಥೆಯವರು ಉಪಯೋಗಿಸಿದರು.

●

ಹೆಚ್ಚು ಕೂಲಿ

ಮೈಸೂರು— ಸೂಯೇಜು ಕೆಲಸಗಾರರಿಗೆ ದಿನ ಕೂಲಿ ರೂ 2 ರಿಂದ 2–20 ಕ್ಕೆ ಹೆಚ್ಚಿಸಲು ಪೌರಸಭೆ ನಿರ್ಧಾರಕ್ಕೆ ಸರಕಾರ ಒಪ್ಪಿದೆ.

●

ಪರೀಕ್ಷಾ ಪದ್ಧತಿ ಸುಧಾರಣೆ

ನವದೆಹಲಿ— ಸ್ಕೂಲು ಪರೀಕ್ಷಾ ಪದ್ಧತಿಯ ಸುಧಾರಣೆಯು ಆರು ರಾಜ್ಯಗಳಲ್ಲಿ ಮಾಡಲ್ಪಾಗಿದ್ದು ಇನ್ನೂ ಆರು ರಾಜ್ಯಗಳಲ್ಲಿ ಮಾಡಲಾಗುತ್ತಿದೆ.

"Bank Road Bahusar – A Fair Price Shop in Actual Practice"

ಸಂಸ್ಕೃತ

ಅಲಹಾಬಾದು— ಜಿಗ್ಯಾಸು ಸರಲಟಂ ಸಂಸ್ಕೃತ ಪ್ರಚಾರ ಸಮಿತಿ ಪದವೀದಾನ ಸಮಾರಂಭದಲ್ಲಿ ಗೌರ್ನರ್ ಶ್ರೀ ಗೋಪಾಲರೆಡ್ಡಿಯವರು ಮಾಡಿದ ಭಾಷಣದಲ್ಲಿ, ಭಾರತದ ಹೆಚ್ಚುಕಡಮೆ ಎಲ್ಲಾ ಭಾಷೆಗಳ ಮಾತೃವಾದ ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ವ್ಯಾಸಂಗದ ಬಗ್ಗೆ ಒತ್ತಾಯವಾಗಿ ಹೇಳಿದರು — ಸಂಸ್ಕೃತವನ್ನು ಅತಿ ಸುಲಭ ರೀತಿಯಲ್ಲಿ ಬೋಧಿಸುವ ವಿಷಯ ಕೇಳಿದಾಗ, ಅಂತಹ ತರಗತಿಯು ಲಕ್ನೊ ನಲ್ಲಿದ್ದರೆ ತಾವೂ ಸೇರಲು ಇಚ್ಛಿಸುವುದಾಗಿ ವಿನೋದವಾಗಿ ಹೇಳಿದರು — ಭಾರತ ಭಾಷೆಗಳ, ಸಾಹಿತ್ಯದ, ಸಂಸ್ಕೃತಿಯ, ನಾಗರೀಕತೆಯ ಮುಂದುವರಿಕೆಗೆ ಸಂಸ್ಕೃತ ವ್ಯಾಸಂಗ ಅವಶ್ಯಕವೆಂದು ಅಧ್ಯಕ್ಷ ಶ್ರೀ ಯುಧಿಷ್ಠಿರಜೀ ಮೀಮಾಂಸಕರವರು ಹೇಳಿದರು.

ಗೋವಧಾ ನಿರೋಧ

ನವದೆಹಲಿ— ವಿಶ್ವ ಆಸ್ತಿಕರ ಸಮ್ಮೇಳನದ ವ್ಯವಸ್ಥಾಪಕರಾದ ಸ್ವಾಮಿ ಶ್ರೀ ಗಜಾನಂದ ಹರಿಮಹಾರಾಜ್‌ರವರು ರಾಷ್ಟ್ರಾಧ್ಯಕ್ಷ ಶ್ರೀ ಗಿರಿಯವರನ್ನು ಅವರ ನಿವಾಸದಲ್ಲಿ ಕಂಡು, ತಮ್ಮ " ಗೋರಕ್ಷ " ಪುಸ್ತಕವನ್ನು ಇತ್ತರು ; ಗೋವು ಮತ್ತು ಬಡವರನ್ನು ರಕ್ಷಿಸುವುದು ಅವಶ್ಯವೆಂದು ಹೇಳಿದರು. ಅಧ್ಯಕ್ಷರು ಕೈ ಮುಗಿದು ಪುಸ್ತಕವನ್ನು ಸ್ವೀಕರಿಸುತ್ತಾ, ಗೋಹತ್ಯ ನಿಲ್ಲಲು ತಾವು ಪ್ರಯತ್ನಿಸುವುದಾಗಿ ಭರವಸೆ ಇತ್ತರೆಂದು, " ಸನಾತನ " ದಿಂದ ತಿಳಿಯಬರುತ್ತದೆ.

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹೀರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಯವಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ದೇಶದ ಹಿತಕಾಗಿ

ಕುಟುಂಬ ಯೋಜನೆ

SHAKTI SUDHA

A Superb Tonic

ವುಡ್‌ಲ್ಯಾಂಡ್ ಜಯಪ್ರದ 3ನೇ ವಾರ
ಶಿನ್ ಅನೋಖೆ ಪ್ರಾರಂಭ

— ಮನನೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —

ಹಸೀನಾ ಮಾನ್ ಜಾಯೇಗಿ

ಶಶಿಕಪೂರ್ ಬಬೀತಾ ಜಾನೀವಾಕರ್

ಸಂಗೀತ : ಕಲ್ಯಾಣಜಿ ಆನಂದಜಿ

[ದಿನ 3 ಪ್ರದರ್ಶನಗಳು]

ಅಪೇರಾ— ತಾ.24-10-69 ರಿಂದ

.... ಅತ್ಯನೋಖೆ ತಮಿಳು ಚಿತ್ರ ....

ತುಣ್ಡಿವನ್

ಪಾತ್ರ— ಎ ವಿ ಎಂ ರಾಜನ್, ಸಾಹುಕಾರ್ ಜಾನಕಿ, ಸುಂದರ್, ನಾಗೇಶ್

ನಿರ್ದೇಶನ : ಎಂ ಎಂ ತಿರುಮಂಗಂ

ದಿನ 3 ಆಟಗಳು

Help The Gorakshana

ಗೋರಕ್ಷಣೆ ಮುಖ್ಯ ಪ್ರಾಣಿದಯಾ ಕಾರ್ಯಗಳ ಪಟ್ಟಿಯಲ್ಲಿ ಸೇರಿಯೇ
ಗೋರಕ್ಷಣೆಗೆ ಹೆಂಚಿಲ ಪೀಡಿ

Protect the Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4